ಈ ಯೋಜನೆಗಾಗಿ ಜನವರಿ 1995 ರ ಅಂತ್ಯದವರೆಗೆ 1689.71 ಲಕ್ಷ ರೂಪಿಗಳನ್ನು ಪೂರ್ಣಗೊಳಿಸಲು ಪರಿಷ್ಕೃತ ಅಂದಾಜಿನ ಮೊತ್ತ ಸುಮಾರು 2400 ಲಕ್ಷಗಳು ಆಗಬಹುದು.

ರಾಜ್ಯದಲ್ಲಿ ವಿದೇಶಿ ಸಂಸ್ಥೆಗಳಿಂದ ಕೈಗಾರಿಕೆಗಳನ್ನು ಪ್ರಾರಂಭಿಸಲು ಉತ್ತೇಜನ ನೀಡುವುದು

351 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನಿವಾಸಿ ಭಾರತೀಯರು ಹಾಗೂ ವಿದೇಶಿ ಸಂಸ್ಥೆಗಳು ಕೈಗಾರಿಕೆಗಳನ್ನು ಪ್ರಾರಂಭಿಸಲು ಮುಂದೆ ಬಂದಲ್ಲಿ ಅವರುಗಳಿಗೆ ಸರ್ಕಾರದವರು ಯಾವ ತರಹದ ಉತ್ತೇಜನಗಳು ಮತ್ತು ರಿಯಾಯಿತಿಗಳನ್ನು ನೀಡುತ್ತಾರೆ.

ಆ) ಈ ಸಂಬಂಧವಾಗಿ ಇತ್ತೀಚೆಗೆ ಕೈಗಾರಿಕಾ ಸಚಿವರು ವಿದೇಶ ಪ್ರವಾಸ ಮಾಡಿದ ಸಂದರ್ಭದಲ್ಲಿ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಅನಿವಾಸಿ ಭಾರತೀಯರಾಗಲಿ ಒಲವು ವ್ಯಕ್ತ ಪಡಿಸಿರುವುದು ನಿಜವೆ?

ಇ) ಈ ವಿಷಯಕ್ಕೆ ಸಂಬಂಧಿಸಿದಂತೆ ಎಷ್ಟು ವಿದೇಶಿ ಕಂಪನಿಗಳ ಜೊತೆ ಒಪ್ಪಂದ್ಕೆ ಸಹಿ ಮಾಡಲಾಗಿದೆ?

ಈ) ಸಚಿವರ ವಿದೇಶಿ ಪ್ರವಾಸದಿಂದ ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಯಾವ ರೀತಿ ಸಹಕಾರಿಯಾಗಲಿದೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು): ಅ) ಅನಿವಾಸಿ ಭಾರತೀಯರು ಹಾಗೂ ವಿದೇಶಿ ಸಂಸ್ಥೆಗಳಿಗೆ ಸ್ಥಳೀಯ ಉದ್ಯಮಿದಾರರಿಗೆ ನೀಡುವ ರೀತಿಯಲ್ಲಿಯೇ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ರಾಜ್ಯ ಸರ್ಕಾರದ ಕೈಗಾರಿಕಾ ನೀತಿಗೆ ಅನುಗುಣವಾಗಿ ನೀಡಲಾಗುವುದು.

ಆ) ಹೌದು. ಈ ಬಗ್ಗೆ ಹಲವಾರು ವಿದೇಶಿ ಕಂಪನಿಗಳು ರಾಜ್ಯದಲ್ಲಿ ಕೈಗಾರಿಕೆ ಸ್ಥಾಪನೆಗೆ ಆಸಕ್ತಿ ತೋರಿಸಿದೆ.

ಇ) ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತವು ಐದು ಇಸ್ರೇಲಿ ಕಂಪನಿಗಳೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ.

ಈ) ಸಚಿವರು ವಿದೇಶದಲ್ಲಿ ಪ್ರವಾಸ ಮಾಡಿದಾಗ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಇಂದು ಅನುಕೂಲಕರ ಅವಕಾಶ ಇರುವುದನ್ನು ವಿದೇಶಿ ಉದ್ಯಮಿದಾರರಿಗೆ ಮನದಟ್ಟು ಮಾಡಿಕೊಟ್ಟಿರುತ್ತಾರೆ. ಹೀಗಾಗಿ ಹಲವಾರು ಉದ್ಯಮಿದಾರರು ರಾಜ್ಯದಲ್ಲಿ ಆಧುನಿಕ ತಂತ್ರಜ್ಞಾನದ ಉದ್ಯಮಗಳನ್ನು ಸ್ಥಾಪಿಸಲು ಮುಂದೆ ಬಂದಿರುತ್ತಾರೆ.

ನಷ್ಟದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಪುನಶ್ಚೇತನದ ಬಗ್ಗೆ

352 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಸಕ್ಕರೆ, ಜವಳಿ ಮತ್ತು ಪರಿಸರ ಮಾಲಿನ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು; (ಈ ಕಾರ್ಖಾನೆಗಳ ಹೆಸರು ಹಾಗೂ ಇವುಗಳ ವಾರ್ಷಿಕ ಉತ್ಪನ್ನಗಳ ಮಾಹಿತಿ ನೀಡುವುದು)

ಆ) ಈ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿರುವ ಸರ್ಕಾರ ಪೇರುಗಳ ಮೊತ್ತವೆಷ್ಟು;

ಇ) ಈ ಕಾರ್ಖಾನೆಗಳ ಪೈಕಿ ಕಳೆದ 5 ವರ್ಷಗಳಿಂದ ನಷ್ಟ ಅನುಭವಿಸುತ್ತಿರುವ ಕಾರ್ಖಾನೆಗಳು ಯಾವುವು; ಹಾಗೂ ಎಷ್ಟು ಪ್ರಮಾಣದ ನಷ್ಟವನ್ನು ಅನುಭವಿಸುತ್ತಿವೆ;

ಈ) ಈ ಕಾರ್ಖಾನೆಗಳ ಪೈಕಿ ಪುನಃಶ್ಚೇತನಕ್ಕೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ.

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ಪರಿಸರ ಮಾಲಿನ್ಯ ರಾಜ್ಯ ಸಚಿವರು) :

ಅ) 17

ಕಾರ್ಖಾನೆಗಳ ಹೆಸರು ವಾರ್ಷಿಕ ಉತ್ಪನ್ನಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.

ಆ) ಒಟ್ಟು ಮೊತ್ತ 3200.41 ಲಕ್ಷ ರೂ.ಗಳು

ಇ) ವಿವರವನ್ನು ಅನುಬಂಧ-2ರಲ್ಲಿ ಒದಗಿಸಿದೆ.

ಈ) ಸತತವಾಗಿ 5 ವರ್ಷಗಳಿಂದ ನಷ್ಟ ಅನುಭವಿಸುತ್ತಿರುವ ಕಾರ್ಖಾನೆಗಳ ಪುನಃಶ್ಚೇತನಕ್ಕೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) **ಕಂಪ್ಲಿ ಸಹಕಾರಿ ಸಕ್ಕರೆ ಕಾರ್ಖಾನೆ :** ಇದು 1958ರಲ್ಲಿ ಪ್ರಾರಂಭವಾಗಿರುತ್ತದೆ. ಇದರ ದಿನವಹಿ ಕಬ್ಬು ಅರೆಯುವ ಸಾಮರ್ಥ್ಯ 1200 ಟನ್‌ಗಳು. ಕೇಂದ್ರ ಸರ್ಕಾರದ ನೀತಿಯ ಪ್ರಕಾರ ಪ್ರಸ್ತುತ ಒಂದು ಕಾರ್ಖಾನೆ ಆರ್ಥಿಕವಾಗಿ ಸಾಧ್ಯತೆ ಇರಬೇಕಾದರೆ ಕನಿಷ್ಠ 2500 ಟನ್‌ಗಳ ಸಾಮರ್ಥ್ಯವನ್ನು ಹೊಂದಿರಬೇಕು. ಈ ಕಾರ್ಖಾನೆಯ ಯಂತ್ರೋಪಕರಣಗಳು ಬಹಳ ಹಳೆಯದಾಗಿರುವುದರಿಂದ, ಕಬ್ಬು ಅರೆಯುವ ಸಾಮರ್ಥ್ಯ ಪೂರ್ಣ ಬಳಕೆ ಆಗದಿರುವುದರಿಂದ ಹಾಗೂ ಇದು ನಷ್ಟವನ್ನು ಅನುಭವಿಸುತ್ತಾ ಬಂದಿದೆ. ಪ್ರಸ್ತುತ ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿದೆ. 93-94ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿರುವುದಿಲ್ಲ. ಹಾಗೂ ಪ್ರಸಕ್ತ ಸಾಲಿನಲ್ಲೂ ಕಾರ್ಯಾರಂಭ ಮಾಡಿರುವುದಿಲ್ಲ.

ಈ ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸಬೇಕೆಂಬ ಉದ್ದೇಶದಿಂದ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾಮಂಡಳಿ ಹಾಗೂ ಟಾಟಾ ಕನ್‌ಸಲ್‌ಟೆನ್ಸಿ ಸರ್ವೀಸ್ ಇವರಿಂದ ಅಧ್ಯಾಯ ವರದಿಯನ್ನು ಪಡೆಯಲಾಗಿರುತ್ತದೆ. ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾಮಂಡಳ 3 ಪರ್ಯಾಯ ಸಲಹೆಗಳನ್ನು ನೀಡಿರುತ್ತದೆ.

1) ಕಾರ್ಖಾನೆಯನ್ನು ಪ್ರಾರಂಭಿಸಲು ಕನಿಷ್ಠ ರೂ 300.00 ಲಕ್ಷ ನೆರವು ಬೇಕೆಂದೂ;

2) ಇರುವ ಸಾಮರ್ಥ್ಯದಲ್ಲೇ ಹಳೆಯದಾದ ಯಂತ್ರೋಪಕರಣಗಳನ್ನು ಬದಲಾಯಿಸಲು ಕಬ್ಬು ಅಭಿವೃದ್ಧಿ ಪಡಿಸಲು ಹಾಗೂ ಕೆಲವು ಜರೂರು ಜವಾಬ್ದಾರಿಗಳನ್ನು ತೀರಿಸಲು 80 ಲಕ್ಷ ಬೇಕಾಗುತ್ತದೆಯೆಂದೂ ಮತ್ತು

3) ಕಾರ್ಖಾನೆಯ ಸಾಮರ್ಥ್ಯವನ್ನು 2500 ಟಿಸಿಡಿಗೆ ಹೆಚ್ಚಿಸಲು ರೂ. 3500.00 ಲಕ್ಷ ಬೇಕೆಂದೂ ಅಂದಾಜು ಮಾಡಲಾಗಿದೆ. ಮಹಾಮಂಡಳದ ಅಭಿಪ್ರಾಯದಲ್ಲಿ ಮೊದಲ ಎರಡು ಆರ್ಥಿಕವಾಗಿ ಸಾಧ್ಯತೆ ಇರುವುದಿಲ್ಲ. ಕಬ್ಬು ಅಭಿವೃದ್ಧಿ ಹಾಗೂ ಸಾಮರ್ಥ್ಯ ವಿಸ್ತರಣೆಯಿಂದ ಮಾತ್ರ ಪುನಃಶ್ಚೇತನಗೊಳಿಸಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಟಾಟಾ ಕನ್‌ಸಲ್‌ಟೆನ್ಸಿಯವರ ವರದಿ ಕಾರ್ಖಾನೆಯನ್ನು ಪುನರಾರಂಭಿಸಲು ರೂ 705.42 ಲಕ್ಷ ನೆರವು ಬೇಕೆಂದು ಹಾಗೂ ಈ ಹಣವನ್ನು

ವಿನಿಯೋಗಿಸಿದರೂ 7-8 ವರ್ಷಗಳು ಮಾತ್ರ ಗುತ್ತಿಗೆ ಕೊಡುವ ಕ್ರಮ ಜಂಟಿ ವಲಯವಾಗಿ ಅಥವಾ ಖಾಸಗಿ ವಲಯವಾಗಿ ಪರಿವರ್ತಿಸುವ ಸಲಹೆಯನ್ನು ಸಹ ಈ ವರದಿಯಲ್ಲಿ ನೀಡಲಾಗಿದೆ.

ಕಂಪ್ಲಿ ಸಹಕಾರಿ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಬಗ್ಗೆ ಹಲವಾರು ಸಭೆಗಳನ್ನು ಉನ್ನತ ಮಟ್ಟದ ವಿವಿಧಹಂತಗಳಲ್ಲಿ ಏರ್ಪಡಿಸಲಾಗಿದೆ. ದಿನಾಂಕ 6-3-95 ರಂದು ಸಹ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಗಿದೆ. ಈ ಕಾರ್ಖಾನೆಯ ಪುನಶ್ಚೇತನಕ್ಕೆ ಅಪಾರ ಹಣ ಬೇಕಾಗಿದ್ದು ಅದನ್ನು ಭರಿಸಲು ಸರ್ಕಾರದಿಂದ ಸಾಧ್ಯವಾಗಲಾದದ್ದರಿಂದ ಈ ಕಾರ್ಖಾನೆಯನ್ನು ಮಾರಾಟದ ಮೂಲಕ ವಿಲೇ ಮಾಡುವ ಬಗ್ಗೆ ಸಹಾ ಸಹಕಾರ ಪರಿಶೀಲಿಸುತ್ತಿದೆ.

2) **ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) :** ಬ್ರಹ್ಮಾವರ ಇದು 1984-85ರ ಸಾಲಿನಲ್ಲಿ ಕಾರ್ಯರಂಭ ಮಾಡಿದ್ದು, ಕಬ್ಬಿನ ಕೊರತೆಯಿಂದ ಸಾಮರ್ಥ್ಯ ಬಳಕೆಯಾಗಿದೆ, ನಷ್ಟವನ್ನು ಅನುಭವಿಸುತ್ತಾ ಬಂದಿದೆ. ಕಾರ್ಖಾನೆಯ ನಿರ್ಮಾಣದ ಸಮಯದಲ್ಲಿ ಉನ್ನತ ಹಣಕಾಸು ಸಂಸ್ಥೆಗಳಿಂದ ರೂ. 369.00 ಲಕ್ಷ ಸಾಲವನ್ನು ನಡೆದಿದ್ದು, ಸದರಿ ಸಾಲವನ್ನು ಕಾಲಕಾಲಕ್ಕೆ ಮರುಪಾವತಿ ಮಾಡದಿದ್ದ ಕಾರಣ ಬಡ್ಡಿ ಸುಸ್ತಿ ಬಡ್ಡಿ ಬೆಳೆದು ನಷ್ಟಕ್ಕೆ ಇದೂ ಕಾರಣವಾಗಿರುತ್ತದೆ. ಸರ್ಕಾರವು ಉನ್ನತ ಹಣಕಾಸು ಸಂಸ್ಥೆಗಳ ಪೂರ್ಣ ಸಾಲವನ್ನು ತೀರಿಸಲು ರೂ. 624.64 ಲಕ್ಷ ನೆರವನ್ನು ಸಾಲದ ರೂಪದಲ್ಲಿ ಕಾರ್ಖಾನೆಗೆ ನೀಡಿದೆ. ಕಾರ್ಖಾನೆಯ ಪ್ರಸ್ತುತ ಹಂಗಾಮಿನಲ್ಲಿ ಈಗಾಗಲೇ 91305 ಮೆ.ಟನ್. ಕಬ್ಬನ್ನು ಅರೆದಿದ್ದು ಇದು ಪ್ರಾರಂಭದಿಂದ ಸಾಧಿಸಿದ ಅತ್ಯಧಿಕ ಪ್ರಗತಿಯಾಗಿರುತ್ತದೆ. ಕಬ್ಬನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರದಿಂದ ರೂ. 315.00 ಲಕ್ಷ ಕಬ್ಬು ಅಭಿವೃದ್ಧಿ ಸಾಲವನ್ನು ಮಂಜೂರ್ಮಾಡುವಂತೆ ಕಾರ್ಖಾನೆ ಕೋರಿದ್ದು, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಶಿಫಾರಸ್ ಮಾಡಿ ಕೇಂದ್ರ ಸರ್ಕಾರದಿಂದ ಈ ಸಾಲದ ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ. ಈ ಕಾರ್ಖಾನೆಗೆ ಹೆಚ್ಚಿನ ಕಬ್ಬು ಪೂರೈಕೆಯಾಗಲೆಂಬ ಕಾರಣದಿಂದ ಹೊಸನಗರ ಮತ್ತು ಬಟ್ಕಳ ತಾಲ್ಲೂಕುಗಳನ್ನು ಇದರ ಕಾರ್ಯವ್ಯಾಪ್ತಿಗೆ ಸೇರಿಸಲಾಗಿರುತ್ತದೆ. ಇದರ ಸಕ್ಕರೆ ಇಳುವರಿಯು ಕಡಿಮೆ ಇದ್ದುದರಿಂದ ಕಡಿಮೆ ಇಳುವರಿ ವಲಯವೆಂದು ಪರಿಗಣಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರವು ಪುರಸ್ಕರಿಸಿರುತ್ತದೆ. ಇದರಿಂದಾಗಿ ಕಾರ್ಖಾನೆಗೆ ರಾಜ್ಯದ ಇತರೆ ಕಾರ್ಖಾನೆಗಳಿಗಿಂತ ಲೆವಿ ಸಕ್ಕರೆ ಬೆಲೆಯಲ್ಲಿ ಕ್ವಿಂಟಾಲ್ ಒಂದಕ್ಕೆ ರೂ. 7.95 ಪೈಸೆ ಹೆಚ್ಚುವರಿಯಾಗಿ ಹಣ ದೊರೆಯುತ್ತಿದೆ. ಈ ಕಾರ್ಖಾನೆಯಲ್ಲಿ ಆರ್ಥಿಕವಾಗಿ ಸಾಧ್ಯವಾಗುವಂತೆ ಮಾಡಲು ಇರುವ ಅವಕಾಶಗಳ ಬಗೆಗೆಲ್ಲಾ ಸರ್ಕಾರವು ಕ್ರಮವಿಟ್ಟಿದೆ.

3) **ವಾಣಿ ವಿಲಾಸ ಸರಕಾರಿ ಸಕ್ಕರೆ ಕಾರ್ಖಾನೆ (ನಿ) ಹಿರಿಯೂರು :** ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯು ಸತತವಾಗಿ 5 ವರ್ಷಗಳಿಂದ ನಷ್ಟವನ್ನು ಅನುಭಿಸುತ್ತಿದ್ದರೂ ಇದು ಹಿಂದಿನ 9 ವರ್ಷಗಳಿಂದ ಸ್ಥಗಿತಗೊಂಡಿದ್ದು 1994-95ರ ಹಂಗಾಮಿನಲ್ಲಿ ಪುನಃ ಕಾರ್ಯಾರಂಭ ಮಾಡಿರುತ್ತದೆ. ಇದರ ಪುನಶ್ಚೇತನಕ್ಕೆ ಸರ್ಕಾರ 100 ಲಕ್ಷಗಳ ಆರ್ಥಿಕ ನೆರವು ನೀಡಿರುತ್ತದೆ.

ಅನುಬಂಧ-1

ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಚಿಸರು ಹಾಗೂ ಉತ್ಪಾದಿಸಿರುವ ಸಕ್ಕರೆಯ ವಿವರಗಳು

ಕ್ರಮ ಸಂಖ್ಯೆ	ಸಕ್ಕರೆ ಕಾರ್ಖಾನೆಯ ಹೆಸರು ಸಹಕಾರಿ ವಲಯ	ದಿನವಹಿ ಕಬ್ಬು ಅರೆಯುವ ಸಾಮರ್ಥ್ಯ (ಟಿ.ಸಿ.ಡಿ.)	1992-93 ಉತ್ಪಾದಿಸಿದ ಸಕ್ಕರೆ (ಮೆ.ಟನ್.)	1993-94 ಉತ್ಪಾದಿಸಿದ ಸಕ್ಕರೆ (ಮೆ.ಟನ್.)	1994-95 ಉತ್ಪಾದಿಸಿದ ಸಕ್ಕರೆ (1.10.94 ರಿಂದ 28.2.95) (ಮೆ.ಟನ್.ಗಳಲ್ಲಿ)
1)	ಭದ್ರಾ	1250	17030	16917	13706
2)	ಬೀದರ್	3500	16396	22058	21096
3)	ದಕ್ಷಿಣ ಕನ್ನಡ	1250	3752	4675	6743
4)	ದೂದ್‌ಗಂಗಾ ಕೃಷ್ಣ	2000	42653	39964	34402
5)	ಘಟಪ್ರಭಾ	1250	25612	21213	26036
6)	ಹಾಲಸಿದ್ದನಾಥ	1250	24944	23780	19695
7)	ಹಿರಣ್ಯಕೇಶಿ	5000	83110	70278	52965
8)	ಹೇಮಾವತಿ	1250	22827	18976	17167
9)	ಕಂಪ್ಲಿ	1200	2585	– ಕೆಲಸ ಮಾಡಿಲ್ಲ –	
10)	ಕರ್ನಾಟಕ	1250	18927	13326	17926
11)	ಮಲಪ್ರಭಾ	3500	68814	64472	48296
12)	ನಂದಿ	2500	9091	17931	27041
13)	ಪಾಂಡವಪುರ	1500	17938	22565	12630
14)	ರಾಯಬಾಗ್	1250	24813	22461	16008
15)	ಶ್ರೀ ಶ್ರೀರಾಮ	1250	20912	13698	9927
16)	ಆಳಂದ	1250	3086	2073	9168
17)	ವಾಣಿವಿಲಾಸ	1250	– ಕೆಲಸ ಮಾಡಿಲ್ಲ –		8013
	ಒಟ್ಟು	31700	402490	274387	340719

ಅನುಬಂಧ-2

1989-90 ರಿಂದ 1993-94ರ ಅವಧಿಯಲ್ಲಿ ನಷ್ಟ ಅನುಭವಿಸಿರುವ ಸಹಕಾರ ಸಕ್ಕರೆ ಕಾರ್ಖಾನೆಗಳ ವಿವರ (ರೂ.ಲಕ್ಷಗಳಲ್ಲಿ)

ಕಾರ್ಖಾನೆಯ ಹೆಸರು	89-90	90-91	91-92	92-93	93-94	31-3-94ಕ್ಕೆ ಕ್ರೋಢೀಕೃತ ನಷ್ಟ
1. ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಆಳಂದ್	215.10	—	—	70.57	111.25	380.98
2. ಕಂಪ್ಲಿ ಸಹಕಾರಿ ಸಕ್ಕರೆ ಕಾರ್ಖಾನೆ, ಕಂಪ್ಲಿ	22.27	98.93	35.74	191.82	203.29	1003.27
3. ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ	18.50	17.76	12.69	0.58	12.32	642.33
4. ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ಬ್ರಹ್ಮಾವರ	115.70	220.69	222.92	246.35	66.18	1690.86
5. ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ	—	5.78	46.71	193.30	180.34	426.98
6. ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ	—	103.91	125.93	30.08	—	642.41
7. ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ	—	—	91.71	220.62	—	278.95
8. ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ	—	—	21.39	87.18	17.31	125.88
9. ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ	—	—	—	249.10	226.26	488.48
ಒಟ್ಟು	371.57	447.07	557.09	1289.60	816.95	5680.24

ಟಿಪ್ಪಣಿ: 31-3-94ಕ್ಕೆ ತೋರಿಸಿರುವ ಕ್ರೋಢೀಕೃತ ನಷ್ಟವು 89-90ಕ್ಕೂ ಹಿಂದಿನ ಸಾಲುಗಳ ನಷ್ಟವನ್ನು ಒಳಗೊಂಡಿದೆ.